**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ರಾಣೇಬೆನ್ನೂರು.**

**ಸಿ . ಸಿ. ನಂಬರಃ 960/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಹನುಮಂತಪ್ಪ ಹಲವಾಗಲ | ಫ್ರಾ.ಸಾ– 1 |
| ತಂದೆಯ ಹೆಸರು | – | ರಾಮಪ್ಪ | ಚಾ.ಸಾ– 1 |
| ವಯಸ್ಸು | – | 48 ವರ್ಷ | |
| ಉದ್ಯೋಗ | – | ವ್ಯವಸಾಯ | |
| ವಾಸ | – | ಆರೇಮಲ್ಲಾಪು | |

ದಿನಾಂಕಃ10–11–2021ರಂದು ಸಾಕ್ಷಿದಾರರನ್ನು ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್ –19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ ಎಪಿಪಿ ಅವರಿಂದಃ**

ನಾನು 3 ಆಕಳು , 2 ಕುರಿ ಮತ್ತು 3 ಮೇಕೆಗಳನ್ನು ಹೊಂದಿರುತ್ತೇನೆ . ಅವುಗಳನ್ನು ನಾನು ನಮ್ಮ ಹೊಲದ ಮನೆಯಲ್ಲಿ ಕಟ್ಟುತ್ತೇನೆ . ಈಗ ಸುಮಾರು 2 ವರ್ಷಗಳ ಹಿಂದೆ ಸಂಜೆ 7.30 ಗಂಟೆ ಸಮಯದಲ್ಲಿ ಮದು ಮತ್ತು ಅವನ ಜೊತೆ 4 ಜನ ಸೇರಿ ನನ್ನ ಮನೆಯಲ್ಲಿ ಕುರಿ ಕಳ್ಳತನ ಮಾಡಲು ಬಂದಿರುತ್ತಾರೆ . ಆ ಕಾಲಕ್ಕೆ ನಾನು ಮಾಲತೇಶ , ಪರಶುರಾಮ , ನಾಗರಾಜ ಮತ್ತು ಇನ್ನಿಬ್ಬರು ಸೇರಿಕೊಂಡು ನಮ್ಮ ಹೊಲದ ಹತ್ತಿರ ರಸ್ತೆಯ ಮೇಲೆ ಮಾತನಾಡುತ್ತಾ ನಿಂತಿದ್ದೇವು ಆ ಸಮಯದಲ್ಲಿ ಆರೋಪಿತರು ತಮ್ಮ ಮೋಟಾರ್ ಸೈಕಲ್ ನ್ನು ತೆಗೆದುಕೊಂಡು ಹೊಲದಲ್ಲಿ ಹೋಗಿ ಮುಂದೆ ಬೈಲಿನಲ್ಲಿ ಇಬ್ಬರು ಜನ ನಿಂತುಕೊಂಡು ಮತ್ತು ಇನ್ನಿಬ್ಬರು ಜನರು ನಮ್ಮ

ಹೊಲದಲ್ಲಿರುವ ಮನೆಯ ಬೀಗವನ್ನು ಮುರಿದಿರುತ್ತಾರೆ . ಅದನನ್ನು ನೋಡಿ ನಾವೆಲ್ಲರೂ ಕೂಡಿಕೊಂಡು ನಮ್ಮ ದನದ ಮನೆಯಕಡೆಗೆ ಹೋದಾಗ ಅವರು ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರು . ನಾವು ಅವರನ್ನು ಬೆನ್ನು ಹತ್ತಿ 3 ಜನರನ್ನು ಹಿಡಿದುಕೊಂಡೆವು . ಅವರ ಹೆಸರನ್ನುವಿಚಾರಿಸಿದಾಗ ಅವರಲ್ಲಿ ಒಬ್ಬ ತನ್ನ ಹೆಸರು ಮಧು ಎಂದು ಹೇಳಿದನು ಮತ್ತು ಇನ್ನಿಬ್ಬರ ಹಾಗು ಓಡಿ ಹೋದವರು ದಾವಣಗೆರೆಯವರು ಎಂದು ಹೇಳಿರುತ್ತಾರೆ ಆದರೆ ಹೆಸರು ನೆನಪಿರುವುದಿಲ್ಲ . ನಾವೆಲ್ಲರೂ ಸೇರಿಕೊಂಡು ಅವರೆಲ್ಲ 3 ಜನರನ್ನು ಕರೆದುಕೊಂಡು ಬಂದೆವು . ತದಾದನಂತರ ವಿಚಾರಿಸಿದ ಮೇಲೆ ಅವರು ಕುರಿಗಳನ್ನು ಕಳ್ಳತನ ಮಾಡಲು ಬಂದಿರುತ್ತೇವೆ ಎಂದು ಹೇಳಿರುತ್ತಾರೆ . ಅವರೆಲಲರೂ ತಮ್ಮ ಮೋಟಾರ್ ಸೈಕಲ್ ಗಳನ್ನು ಅಲ್ಲೆ ಬಿಟ್ಟು ಹೋಗಿರುತ್ತಾರೆ . ಸದರಿ ಮೋಟಾರ್ ಸೈಕಲ್ ಗಳನ್ನು ನಾವು ಪೋಲಿಸರಿಗೆ ಒಪ್ಪಿಸಿರುತ್ತೇವೆ . ಊರಿನ ಜನರೆಲಲರೂ ಸೇರಿಕೊಂಡು ಅವರನ್ನು ಕರೆದುಕೊಂಡು ಪೋಲಿಸ್ ಠಾಣೆಗೆ ಬೆಳಗಿನ ಜಾವ 3.00 ಗಂಟೆಗೆ ಬಂದು ದೂರನ್ನು ಕೊಟ್ಟಿರುತ್ತೇವೆ . ಈಗ ನೋಡುತ್ತಿರುವ ದಾಖಲೆ ನಾನು ಕೊಟ್ಟ ದೂರು ಆಗಿದ್ದು, ಅದರಲ್ಲಿರುವ ಸಹಿ ನನ್ನದು , ಸಾಕ್ಷಿ ಗುರುತಿಸಿರುವ ಸಹಿ ಇರುವ ದೂರನ್ನು ನಿಪಿ-1 ಎಂದು , ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನನ್ನ ದನದ ಮನೆಯನ್ನು ನೋಡಿದರೆ ಗುರುತಿಸುತ್ತೇನೆ . ಈಗ ನೋಡುತ್ತಿರುವ 4 ಭಾವಚಿತ್ರ ಗಳಲ್ಲಿರುವ ದನದ ಮನೆ ನಮ್ಮ ದನದ ಮನೆ ಆಗಿರುತತದೆ. ಸಾಕ್ಷಿ ಗುರುತಿಸಿರುವ 4 ಭಾವಚಿತ್ರ ಗಳನ್ನು ನಿಪಿ-2 ರಿಂದ 5 ಎಂದು ಗುರುತಿಸಲಾಯಿತು. ನಿಪಿ-4 ರಲ್ಲಿ ಕಾಣಿಸುತ್ತಿರುವ ಮೋಟಾರ್ ಸೈಕಲ್ ಆರೋಪಿತರು ಬಿಟ್ಟು ಹೋದ ಬೈಕ್ ಆಗಿರುತ್ತದೆ . ಆರೋಪಿತರನನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದಿರುವ 3 ನೇ ಆರೋಪಿತನು ಆ ದಿನ ಕಳ್ಳತನ ಮಾಡುವಾಗ ನಾನು ಹಿಡಿದ

ಆರೋಪಿತನಾಗಿರುತ್ತಾನೆ . ಉಳಿದ 2 ನೇ ಆರೊಪಿತನನ್ನು ನೋಡಿದರೆ ಗುರುತಿಸಬಲ್ಲೆ .

**(ಈ ದಿನ 2 ನೇ ಆರೋಪಿತರನು ಗೈರು ಹಾಜರು ಇದ್ದು ಅರ್ಜಿ ಸಲ್ಲಿಸಿದ್ದು 2 ನೇ ಆರೋಪಿನ ಪರ ವಕೀಲರು ಗುರುತಿಸುವಿಕೆಯ ಬಗ್ಗೆ ತಕರಾರು ಇರುತ್ತದೆ ಎಂದು ತಿಳಿಸಿರುತ್ತಾರೆ .)**

**(ಸಾಕ್ಷಿಯ ಮುಂದುವರೆದ ಮುಖ್ಯವಿಚಾರಣೆಯನ್ನು ಖರ್ಚಿನ ಮೇರೆಗೆ ಮುಂದೂಡ ಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಓ ಹೇ ಕೇ ಸರಿ ಇದೆ.

ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.